<u>**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ**</u>

ಓಎಸ್.24–12

ಡಿ.ಡಬ್ಲ್ಯೂ.1

ಹೆಸರು ಃ ಮುನಿರಾಜು

ಪ್ರಮಾಣೀಕೃತ ದಿನಾಂಕಃ– 6.10.2018

**ಪಾಟೀ ಸವಾಲು 6ನೇ ಪ್ರತಿವಾದಿ ಪರ ಎನ್.ಜಿ.ಜೆ ವಕೀಲರಿಂದಃ–**

ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಸಂಗತಿಗಳು ಗೊತ್ತು. ಅದನ್ನು ನಾನು ಹೇಳಿ ಬರೆಸಿರುತ್ತೇನೆ. ಮುತ್ತಣ್ಣನಿಗೆ ಎಂಬುವವರಿಗೆ 3 ಹೆಣ್ಣು,1 ಗಂಡು ಮಕ್ಕಳು, ಒಟ್ಟು ಜನ ಮಕ್ಕಳು. ಅವರುಗಳು ಎಂದರೆ 6ನೇ ಪ್ರತಿವಾದಿ, ಮತ್ತು ದೊಡ್ಡ ಚೆನ್ನಮ್ಮ, ಚಿಕ್ಕ ಚೆನ್ನಮ್ಮ, ಗೌರಮ್ಮ ಆಗಿರುತ್ತಾರೆ. ನಮ್ಮ ತಾತ ಮುತ್ತಣ್ಣ ಮೃತಪಟ್ಟಿರುವುದು ನನಗೆ ಗೊತ್ತಿಲ್ಲ. ಅವರು ಮೃತಪಟ್ಟು ಸುಮಾರು 60 ವರ್ಷಗಳು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಾಯಿ ಚೆನ್ನಮ್ಮ ಮೃತಪಟ್ಟು ಈಗ ಸುಮಾರು 25 ರಿಂದ 30 ವರ್ಷಗಳು ಆಗಿರುತ್ತದೆ.

ದೊಡ್ಡ ಚೆನ್ನಮ್ಮ ನಮ್ಮ ತಾಯಿಗಿಂತ ಮೊದಲೇ ಮೃತಪಟ್ಟಿರುತ್ತಾರೆ. ಮುತ್ತಣ್ಣ ಅವರಿಗಿಂತ ಮೊದಲೇ ಮೃತಪಟ್ಟಿದ್ದರು ಎಂದರೆ ಸರಿ. 6ನೇ ಪ್ರತಿವಾದಿ ತರಕಾರಿ ವ್ಯಾಪಾರ ಮಾಡುತ್ತಾರೆ ಎಂದರೆ ಸರಿ. ನಮ್ಮ ತಾಯಿಯನ್ನು ಬೆಂಗಳೂರಿಗೆ ಮದುವೆ ಮಾಡಿದ್ದರು. ನಮ್ಮ ದೊಡ್ಡಮ್ಮನನ್ನು ಮುಗಬಾಳಕ್ಕೆ, ಮತ್ತು ನಮ್ಮ ಚಿಕ್ಕಮ್ಮನನ್ನು ಬೆಂಗಳೂರಿಗೆ ಕೊಟ್ಟು ವಿವಾಹ ಮಾಡಿಕೊಟ್ಟಿದ್ದರು. ದಾವಾ ಆಸ್ತಿ ಐಟಂ ನಂ. 3 ಅನ್ನು 7ನೇ ಪ್ರತಿವಾದಿ(ಅಶ್ವಥಾಚಾರಿ) ಎಂಬುವವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ಸ್ವತ್ತನ್ನು ಯಾವಾಗ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ.

ಕ್ರಯ ಪತ್ರ ವಜಾ ಮಾಡುವಂತೆ ಈ ದಾವೆಯಲ್ಲಿ ಕೋರಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಐಟಂ ನಂ.2 ಅನ್ನು 6ನೇ ಪ್ರತಿವಾದಿ ಖರೀದಿಸಿದ್ದಾರೆ ಎಂದರೆ ಸರಿ. ದಾವಾ ಆಸ್ತಿ ಐಟಂ ನಂ. 1 6ನೇ ಪ್ರತಿವಾದಿಗೆ ಅವರ ದೊಡ್ಡಪ್ಪನಿಂದ ಬಂದಿದ್ದು, ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಂ ನಂ. 1 ಮತ್ತು 2 ರಲ್ಲಿ 6ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಂ ನಂ. 4ರಲ್ಲಿ ಮನೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ 6ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಐಟಂ ನಂ. 4 ರಲ್ಲಿ ಒಂದು ಆರ್.ಸಿ.ಸಿ. ಮನೆ ಇದೆ ಎಂದರೆ ಸರಿ. ಸದರಿ ಮನೆಯಲ್ಲಿ 6ನೇ ಪ್ರತಿವಾದಿ ವಾಸವಿದ್ದಾರೆ ಎಂದರೆ ಸರಿ.

ಸದರಿ ಮನೆ ಹೊರತು ಪಡಿಸಿ ಬೇರೆ ಯಾವುದೇ ಮನೆ ಇಲ್ಲ ಎಂದರೆ ಸರಿ. ನಾವು ಮತ್ತು ಗೌರಮ್ಮನವರು ಶ್ಯಾಮಿಲಾಗಿ ಈ ದಾವೆಯನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಂ 1,2,4 6ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಈ ಸ್ವತ್ತುಗಳಲ್ಲಿ ನಾವು ಸ್ವಾಧೀನದಲ್ಲಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಅದೇ ರೀತಿ ಅವುಗಳ ಜಂಟಿ ಖಾತೆ ಮಾಡುವಂತೆ ಕೋರಿ ಯಾವುದೇ ಅರ್ಜಿ ನೀಡಿಲ್ಲ. ಅದೇ ರೀತಿ 6ನೇ ಪ್ರತಿವಾದಿ ಹೆಸರಿನಲ್ಲಿರುವ ಖಾತೆ ಪ್ರಶ್ನಿಸಿ ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ. ದಾವಾ ಆಸ್ತಿಗಳು 6ನೇ ಪ್ರತಿವಾದಿಗೆ ಸೇರಿದ್ದು, ಎಂದರೆ ಸರಿಯಲ್ಲ. ಅವುಗಳಲ್ಲಿ ನಮಗೆ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾವು ಒಟ್ಟು ಕುಟುಂಬದ ಸದಸ್ಯರು ಅಲ್ಲ ಎಂದರೆ ಸರಿಯಲ್ಲ. ನಾವು ಈ ದಾವೆ ಹೂಡುವ ಪೂರ್ವದಲ್ಲಿ ವಿಭಾಗ ಮಾಡಿಕೊಡುವಂತೆ ಎಂದು ಕೇಳಿದ್ದೇವು. ಹಾಗೆ ಕೇಳಿದ ದಿನಾಂಕ ಹೇಳಲಾಗುವುದಿಲ್ಲ. ಆ ರೀತಿ ಯಾವುದೇ ಪಂಚಾಯ್ತಿ ಮಾಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಹೊಸಕೋಟೆ.**